O.S. ನಂಬರಃ 34/2020

ಪಿ. ಡಬ್ಲ್ಯೂಃ 1

ದಿಃ 26-09-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 12 ನೇ ಪ್ರತಿವಾದಿ ಪರ ಪಾಟಿ ಸವಾಲು ಮಾಡಲು ಕಾಲಾವಕಾಶ ಕೇಳಿದ್ದು, ಸಕಾರಣ ಇಲ್ಲದೇ ಇರುವುದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟಿ ಸವಾಲುಃ 19,20,22 ನೇ ಪ್ರತಿವಾದಿ ಪರ ಶ್ರೀ ಬಿ.ಡಿ.ಎನ್. ವಕೀಲರಿಂದಃ

ಮೂಲ ಪುರುಷ ಬೀರಪ್ಪ ಮೃತಪಟ್ಟ ನಂತರ ಆತನ ಮಕ್ಕಳಾದ ದಿನ್ನಾ, ಬೊಬ್ರಿ ಹಾಗೂ ಗಣಪತಿ ರವರು ದಾವಾ ಆಸ್ತಿಗಳನ್ನು ಎಷ್ಟು ವರ್ಷ ಸಾಮೂಹಿಕವಾಗಿ ವಹಿವಾಟು ಮಾಡಿದ್ದಾರೆ ಎಂದು ಹೇಳಲು ಬರುವುದಿಲ್ಲ. ಬೀರಪ್ಪ ಮೃತಪಟ್ಟ ನಂತರ ಆತನ ಮಕ್ಕಳು ಪ್ರತ್ಯೇಕ ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿ. ಸದರಿ ಬೀರಪ್ಪನ ಮಕ್ಕಳು ಪ್ರತ್ಯೇಕ ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡ ಬಂದ ಜಮೀನಿನ ಕುರಿತು ಭೂ ಕಂದಾಯ ಕಾಯ್ದೆ ಯಡಿಯಲ್ಲಿ ಜಮೀನು ಮಂಜೂರಿಗಾಗಿ ಅರ್ಜಿ ತುಂಬಿದ್ದಾರೆ ಎಂದರೆ ಸರಿ. ಭೂ ನ್ಯಾಯ ಮಂಡಳಿಗೆ ತುಂಬಿದ ಅರ್ಜಿ ಪ್ರಕಾರ ಅವರವರ ಹೆಸರಿನಲ್ಲಿ ಪ್ರತ್ಯೇಕವಾಗಿ ಜಮೀನು ಮಂಜೂರಿಯಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಸಾಮೂಹಿಕವಾಗಿ ಮಂಜೂರಿಯಾಗಿದೆ ಎಂದು ಹೇಳುತ್ತಾರೆ.

ದಾವಾ ಸರ್ವೇ ನಂ. 298/1ಅ ರಲ್ಲಿ ಬೀರಪ್ಪನ ಮಕ್ಕಳಿಗೆ ತಲಾ 9-ಗುಂಟೆಯಂತೆ ಪ್ರತ್ಯೇಕ ಪ್ರತ್ಯೇಕವಾಗಿ ಜಮೀನು ಮಂಜೂರಿಯಾಗಿದೆ ಎಂದರೆ ಸರಿ. ದಾವಾ ಆಸ್ತಿಗಳ ವಹಿವಾಟಿ ಇದ್ದ ಪ್ರಕಾರ ಪ್ರತ್ಯೇಕ ಪ್ರತ್ಯೇಕ ಅರ್ಜಿ ತುಂಬಿದ್ದರಿಂದ ಆ ಪ್ರಕಾರ ಜಮೀನು ಮಂಜೂರಿಯಾಗಿದೆ ಎಂದರೆ ಸರಿ. ಸರ್ವೇ ನಂ. 316/2ಅ ಮತ್ತು 316/2ಸಿ ಇವು ನಮ್ಮ ಕಬ್ಜಾದಲ್ಲಿದ್ದವು ಎಂದರೆ ಸರಿ. ಸದರಿ ಆಸ್ತಿಗಳ ಮೇಲೆ ಸಾಲ ಪಡೆದಿದ್ದರಿಂದ ಅವುಗಳು ಮಾರಾಟವಾಗಿವೆ ಎಂದರೆ ಸರಿ. ಸದರಿ ಜಮೀನುಗಳು ನನ್ನ ಪಾಲಿಗೆ ಬಂದಿದ್ದವು ಎಂದರೆ ಸಾಮೂಹಿಕದಲ್ಲಿದ್ದವು ಎಂದು ಹೇಳುತ್ತಾರೆ. ಒಂದು ವೇಳೆ ಪಾಲುವಾಟ್ನಿ ಮಾಡಿದರೆ ನಾನು ಮಾರಾಟ ಮಾಡಿದ ಜಮೀನು ಹೊರತುಪಡಿಸಿ, ವಿಭಾಗ ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಸರಿ.

ಪ್ರತಿವಾದಿ ನಂ. 19 ರಿಂದ 22 ರವರಿಗೆ ಪ್ರತ್ಯೇಕವಾಗಿ ಜಮೀನು ಮಂಜೂರಿಯಾಗಿತ್ತು ಎಂದರೆ ಸರಿ. ಸದರಿ ಪ್ರತಿವಾದಿಯರು ತಮಗಿದ್ದ ಜಮೀನಿನ ಕುರಿತು ಪಾಲುವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನನ್ನ ವಹಿವಾಟಿಯಲ್ಲಿರುವ ಜಾಗೆ ಹಾಗೂ ಮನೆ ರಸ್ತೆಗೆ ತಾಗಿಕೊಂಡಿದೆ ಎಂದರೆ ಸರಿ. 19 ರಿಂದ 22 ನೇ ಪ್ರತಿವಾದಿಯರ ಮನೆ ನಮ್ಮ ಮನೆಯ ಹಿಂದಿದೆ ಎಂದರೆ ಸರಿ. ಸದರಿ ಪ್ರತಿವಾದಿಯರಿಗೆ ತಮ್ಮ ಮನೆಗೆ ಹೋಗಲು ಯಾವುದೇ ರಸ್ತೆ ಇಲ್ಲ ಎಂದರೆ ಸಾಕ್ಷಿ, ಕಾಲುದಾರಿ ಇದೆ ಎಂದು ಹೇಳುತ್ತಾರೆ. ಸದರಿ ಪ್ರತಿವಾದಿಯರು ತಮ್ಮ ಮನೆಗೆ ಹೋಗಲು ಸುತ್ತು ಹಾಕಿ ಹೋಗಬೇಕಾಗುತ್ತದೆ ಎಂದರೆ ಸರಿ.

19 ರಿಂದ 22 ನೇ ಪ್ರತಿವಾದಿಯರು ತಮ್ಮ ಆಸ್ತಿಗೆ ಹೋಗಿ ಬರಲು ಇದ್ದ ರಸ್ತೆಯನ್ನು ಬಂದ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯರಿಗೆ ಹೋಗಿ ಬರಲು ನನ್ನ ವಹಿವಾಟಿಯಲ್ಲಿರುವ ಆಸ್ತಿಯಿಂದ ರಸ್ತೆ ಬಿಡಬೇಕಾಗುತ್ತದೆ ಎಂದರೆ ಸಾಕ್ಷಿ ಸಾಮೂಹಿಕ ರಸ್ತೆ ಈಗಾಗಲೇ ಇದೆ ಎಂದು ಹೇಳುತ್ತಾರೆ. ಈ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೂಲಪುರುಷ ಬೀರಪ್ಪನದು ಹುಲ್ಲು ಹಾಸಿನ ಮನೆ ಇತ್ತು ಎಂದರೆ ಸರಿ. ಮೂಲಪುರುಷ ಬೀರಪ್ಪ ಮೃತಪಟ್ಟ ನಂತರ ಕಬ್ಜಾ ವಹಿವಾಟಿಯಲ್ಲಿರುವಂತೆ ಪ್ರತ್ಯೇಕ ಪ್ರತ್ಯೇಕ ಮನೆ ಕಟ್ಟಿಸಿಕೊಂಡಿರುತ್ತೇವೆ ಎಂದರೆ ಸರಿ. ಮೊದಲಿನ ಮನೆ ಸಧ್ಯ ಇಲ್ಲ ಎಂದರೆ ಸರಿ. 22 ನೇ ಪ್ರತಿವಾದಿ ಪ್ರತ್ಯೇಕ ಮನೆಯನ್ನು ಕಟ್ಟಿಕೊಂಡಿದ್ದಾನೆ ಎಂದರೆ ಸರಿ. ಬೀರಪ್ಪನ ಮಕ್ಕಳು ಪ್ರತ್ಯೇಕ ಪ್ರತ್ಯೇಕ ಫಾರಂ ನ್ನು ಭೂ ನ್ಯಾಯ ಮಂಡಳಿಗೆ ತುಂಬಿದ್ದರಿಂದ ವ, ದಾವಾ ಆಸ್ತಿಗಳೆಲ್ಲ ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ನಾನು ಜಮೀನು ಮಾರಾಟ ಮಾಡಿದ್ದರಿಂದ ಹಾಗೂ ನಮ್ಮ ಕುಟುಂಬಕ್ಕೆ ಮಂಜೂರಿಯಾದ ಜಮೀನಿನ ಕುರಿತು ಕಡಿಮೆ ವಿಸ್ತೀರ್ಣದ ಅರ್ಜಿ ತುಂಬಿದ್ದರಿಂದ ಹೆಚ್ಚಿನ ಆಸ್ತಿ ಪಡೆಯಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಬೀರಪ್ಪನ ಮಕ್ಕಳು ಭೂ ಕಂದಾಯ ಕಾಯ್ದೆ ಬರುವ ಪೂರ್ವದಲ್ಲಿಯೇ ಪ್ರತ್ಯೇಕ ಪ್ರತ್ಯೇಕ ಸಾಗುವಳಿ ಮಾಡಿಕೊಂಡು ಬಂದಿದ್ದರು ಎಂದರೆ ಮಾಹಿತಿ ಇಲ್ಲ. ದಾವಾ ಆಸ್ತಿಗಳ ಕುರಿತು ಪುನಃ ಪಾಲುವಾಟ್ನಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.